# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189-ಹೊಂಗಸಂದ್ರ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 27.10.2021 ಬುಧವಾರ ರಂದು ಸಂಜೆ 03:30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು 189-ಹೊಂಗಸಂದ್ರ ವಾರ್ಡಿನ ಡಾ|| ಬಿ.ಆರ್ ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆಸಿದ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಉಪಸ್ಥಿತರು :**

**ಹಾಜರಿದ್ದ ಅಧ್ಯಕ್ಷರು / ನೋಡಲ್ ಅಧಿಕಾರಿ, ಸಹಾಯಕ ಅಭಿಯಂತರರು/ ಕಾರ್ಯದರ್ಶಿ, ಸದ್ಯಸರುಗಳು, ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀಮತಿ ಮಾಲತಿ. ಆರ್ | ಅಧ್ಯಕ್ಷರು/ನೋಡಲ್ ಅಧಿಕಾರಿಗಳು<br>ಕಾರ್ಯಪಾಲಕ ಅಭಿಯಂತರರು<br>ಬೃಹತ್ ನೀರುಗಾಲುವೆ ವಿಭಾಗ |
| 2 | ಶ್ರೀ ಕೆ.ಎಸ್. ರಾಮೇಗೌಡ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು<br>ವಾರ್ಡ್ ಸಂ. 189, ಹೊಂಗಸಂದ್ರ |
| 3 | ಶ್ರೀ ಎಂ ಮುನಿರಾಜು | ಸದಸ್ಯರು |
| 4 | ಶ್ರೀ ಡಾ|| ರಂಗರಾಜನ್.ಬಿ | ವೈದ್ಯರು (ಪ್ರ.ಆ.ಕೇ) |
| 5 | ಶ್ರೀಮತಿ ಡಾ|| ಲೀನಾ ವಿ.ಎಲ್ | ಕೋವಿಡ್ ವೈದ್ಯಾಧಿಕಾರಿಗಳು |
| 6 | ಶ್ರೀ ವಾಸುದೇವ | ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಎ.ಎಸ್.ಐ)<br>ಬೇಗೂರು ಪೋಲಿಸ್ ಠಾಣೆ. |
| 7 | ಶ್ರೀ ಹೆಚ್.ಆರ್ ಹರೀಶ್ | ಅರಣ್ಯ ವಲಯ ಅಧಿಕಾರಿ (ಬೊ.ವ) |
| 8 | ಶ್ರೀ ಸಂತೋಷ ಪ್ರಸಾದ್.ಎಮ್ | ಸಹಾಯಕ ಅಭಿಯಂತರರು,ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 9 | ಶ್ರೀ ರಾಮಕೃಷ್ಣ.ಆರ್ | ಕಂದಾಯ ನಿರೀಕ್ಷಕರು, ಹೊಂಗಸಂದ್ರ |
| 10 | ಶ್ರೀ ಹೆಚ್ ನರಸಪ್ಪ | ತೋಟಗಾರಿಕೆ ನಿರೀಕ್ಷಕರು |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಲಾಗಿರುತ್ತದೆ. ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಅಧ್ಯಕ್ಷರು ಮತ್ತು ಸದಸ್ಯರು ಆಕ್ಷೇಪಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

- **ಆರೋಗ್ಯ ಇಲಾಖೆ (ಕೋವಿಡ್-19):**

  1. ಶ್ರೀ ಡಾ|| ರಂಗರಾಜನ್.ಬಿ ರವರು ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಲಸಿಕೆ ನೀಡಿರುವ ಬಗ್ಗೆ ವಿವರಿಸುತ್ತಾ ದಿನಾಂಕ: 08.10.2021 ರಿಂದ 27.10.2021 ರವರೆಗೆ

     ಒಟ್ಟು 1403 RTPCR

     ಒಟ್ಟು 418 Rapid ಕೋವಿಡ್ ಪರೀಕ್ಷೆ ಮಾಡಲಾಗಿದ್ದು

     ಒಟ್ಟು 05 ಕೋವಿಡ್ ಪ್ರಕರಣಗಳು ವರದಿಯಾಗಿರುವುದಾಗಿ ಸಭೆಗೆ ತಿಳಿಸಿದ್ದರು.

     18 ರಿಂದ 44 ಮೇಲ್ಪಟವರಿಗೆ

     ಒಟ್ಟು 800 ಮೊದಲನೇ ಹಂತದ ಲಸಿಕೆ

     ಒಟ್ಟು 3152 ಎರಡನೇ ಹಂತದ ಲಸಿಕೆಯನ್ನು ನೀಡಲಾಗಿದೆ ಹಾಗೂ 45 ವರ್ಷ ಮೇಲ್ಪಟವರಿಗೆ ಒಟ್ಟು 76 ಮೊದಲನೇ ಹಂತದ ಲಸಿಕೆ ಒಟ್ಟು 56 ಎರಡನೇ ಹಂತದ ಲಸಿಕೆಯನ್ನು ನೀಡಲಾಗಿದೆ ಎಂದು ಶ್ರೀ ಡಾ|| ಕೃಷ್ಣಪ್ಪ ವೈದ್ಯರು ಸಭೆಗೆ ತಿಳಿಸಿದರು.

(ಮು.ತಿ.ನೋ)

Scanned with

- **ಕಂದಾಯ:-**
  1. ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಇಂದಿನ ಸಭೆಯಲ್ಲಿ ಹೊಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಆಕ್ಟೋಬರ್ ಮಾಹೇಯಾಲ್ಲಿ ಎಷ್ಟು ಕಂದಾಯ ವಸೂಲಾತಿಯಾಗಿರುತ್ತದೆ ಎಂದು ಶ್ರೀ ಎಂ ಮುನಿರಾಜು ಸದ್ಯಸರು ರವರು ಸಭೆಯಲ್ಲಿ ಪ್ರಸ್ತಾಪಿಸಿದರು, ಈ ಬಗ್ಗೆ ರಾಮಕೃಷ್ಣ. ಆರ್ ಕಂದಾಯ ನಿರೀಕ್ಷಕರು, ಹೊಂಗಸಂದ್ರ ರವರು ಒಟ್ಟಾರೆಯಾಗಿ.

| | | | | | |
|---|---|---|---|---|---|
| Demand | - 16.76 Lakhs | Collection | - 09.26 Lakhs | Outstanding - | 5.99 Lakhs |
| Arrears | - 6.16 Lakhs | Arrears | - 1.97 Lakhs | Arrears - | 3.76 Lakhs |
| Current year - | 10.60 Lakhs | Current year - | 7.29 Lakhs | Current year - | 2.23 Lakhs |

- **ಪೋಲಿಸ್ ಇಲಾಖೆ:-**
  1. ವಾರ್ಡ್ ವ್ಯಾಪ್ತಿಯ ಪಾದಚಾರಿ ಮಾರ್ಗದಲ್ಲಿ ಹೆಚ್ಚಾಗಿರುವ ತಳ್ಳುವ ಗಾಡಿಯನ್ನು ತೆರವುಗೊಳಿಸಲು ಶ್ರೀ ಎಂ ಮುನಿರಾಜು ರವರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ವಾಸುದೇವ, ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಎ.ಎಸ್.ಐ) ಬೇಗೂರು ಪೋಲಿಸ್ ಠಾಣೆ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಇಲಾಖೆ ರವರೊಂದಿಗೆ ಜಂಟಿಯಾಗಿ ತಪಾಸಣೆ ಮಾಡಿ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು

- **ಬಿ.ಡಬ್ಲ್ಯೂ.ಎಸ್.ಎಸ್.ಬಿ.**
  1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಸನ್ಮಾನ್ಯ ಶಾಸಕರಾದ ಶ್ರೀ ಎಂ ಸತೀಶ್ ರೆಡ್ಡಿ ರವರ ಮನೆ ಮುಂದೆ ಸ್ಯಾನಿಟರಿ ಕಾಮಗಾರಿಯನ್ನು ಕೈಗೆತಿಕೊಳ್ಳಲು ಸಭೆಯಲ್ಲಿ ಎಲ್ಲಾ ಸದ್ಯಸರ ಅಭಿಪ್ರಾಯದಂತೆ ಚರ್ಚಿಸಲಾಯಿತು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರ, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಶೀಘ್ರದಲೇ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.
  2. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ 6ನೇ ಮುಖ್ಯ ರಸ್ತೆ ಅಂಜನೇಯ ದೇವಸ್ಥಾನದ ಬಳಿ ಹಳೇ ಚೇಂಬರ್ ಮಾರ್ಗವು ಇದ್ದು ಹೊಸ ಮಾರ್ಗದ ವ್ಯವಸ್ಥೆ ಮಾಡಿಸಲು ಶ್ರೀ ಎಂ ಮುನಿರಾಜು ಸದ್ಯಸರು ರವರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ವಾರ್ಡ್ ಸಂಖ್ಯೆ: 189ರ
ಸಹಾಯಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

27/10/21
ಅಧ್ಯಕ್ಷರು/ ನೋಡಲ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with